**ದಿನಾಂಕ: 18-07-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲುಃ ಶ್ರೀ  ಬಿ ಎಂ ವಕೀಲರಿಂದ ವಾದಿಯರ ಪರವಾಗಿ.**

26) 9ನೇ ದಾವಾ ಸರ್ವೆ ನಂ. 160/1 ಕ್ಕೆ ಎ ಸಿ ನ್ಯಾಯಾಲಯದಲ್ಲೆನಾದರೂ ವ್ಯಾಜ್ಯ ನಡೆಯುತ್ತಿದ್ದೇಯಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಡಿ 88 ನ ಎ.ಸಿ ಆದೇಶವನ್ನು ನಾನು ಓದಿರುವುದಿಲ್ಲ. ಎ ಸಿ ನ್ಯಾಯಾಲಯದಲ್ಲಿ ಏನು ಆದೇಶವಾಗಿರುತ್ತದೆ ಎಂದು ತೋರಿಸಲು ನಿಡಿ 88 ನ್ನು ಹಾಜರುಪಡಿಸಿರುತ್ತೇನೆ. ಎ.ಸಿ ನ್ಯಾಯಾಲಯದಲ್ಲಿ ಏನು ಆದೇಶ ಆಗಿರುತ್ತದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ.

27) ನಿಡಿ 88 ರಂತೆ ಆದೇಶ ಮಾಡಬೇಕಾದ ಸಮಯದಲ್ಲಿ ಒ ಎಸ್ 276/2013 ದಾವೆ ನಡೆಯುತ್ತಿತ್ತು ಎನ್ನುವುದು ಸರಿ. 9ನೇ ದಾವಾ ಸ್ವತ್ತನ್ನು ಮಾರಾಟ ಮಾಡಿರುವುದು ಅಸಿಂಧು ಎಂದು ಪರಿಗಣಿಸಿ ಎ.ಸಿ ನ್ಯಾಯಾಲಯವು ನಿಡಿ 88 ರಂತೆ ಆದೇಶ ಮಾಡಿ ಖಾತೆಯನ್ನು ಮೂಲ ಖಾತೆದಾರರಿಗೆ ವರ್ಗಾವಣೆ ಮಾಡಬೇಕು ಎಂದು ಮಾಡಿದ್ದರು ಎಂದರೆ ಸರಿ. ಸಿವಿಲ್ ನ್ಯಾಯಾಲಯದಲ್ಲಿ ಸ್ವತ್ತುಗಳನ್ನು ಮಾರಾಟ ಮಾಡಬಾರದು ಎಂದು ನಿರ್ಭಂಧಕಾಜ್ಞೆ ಇದ್ದರೂ ಅದನ್ನು ಉಲ್ಲಂಘಿಸಿ ನಿಮ್ಮ ತಂದೆ ಮಾರಾಟ ಮಾಡಿದ್ದರು ಎಂದು ಸೂಚಿಸಲಾಗಿ ಸಾಕ್ಷಿ ನಮಗೆ ಮಾಹಿತಿ ಇರಲಿಲ್ಲ ಎಂದು ನುಡಿಯುತ್ತಾರೆ. ಸ್ವತ್ತನ್ನು ಮಾರಾಟ ಮಾಡುವ ಹಕ್ಕು ಇರಲಿಲ್ಲ ಎಂದು ಸೂಚಿಸಲಾಗಿ ಸಾಕ್ಷಿ ನನಗುವ ನಮ್ಮ ತಂದೆಗೂ ಮಾಹಿತಿ ಇರಲಿಲ್ಲ ಎಂದು ನುಡಿಯುತ್ತಾರೆ.

28) ಒ ಎಸ್ 276/2013 ರ ವಿಚಾರ 1ನೇ ಪ್ರತಿವಾದಿಗೆ ಗೊತ್ತಿತ್ತು. ಈ ದಾವೆಯಲ್ಲಿ ಶಿವರುದ್ರೇಗೌಡರ ಮಕ್ಕಳಾದ ಪ್ರಕಾಶ್ ಮತ್ತು ಕುಮಾರ್ ರವರನ್ನು ಪಕ್ಷಗಾರರನ್ನಾಗಿ ಮಾಡಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ಗುರುಹಿರಿಯರ ಮಾತಿನಂತೆ ರಾಜಿ ಮಾಡಿಕೊಂಡಿದ್ದು, ದಾವೆ ಮುಂದುವರೆಸಲು ಇಷ್ಟವಿಲ್ಲವೆಂದು ಸದರಿ ದಾವೆಯ ವಾದಿ ಮತ್ತು 1ನೇ ಪ್ರತಿವಾದಿ ರಾಜಿ ಮಾಡಿಕೊಂಡಿದ್ದರು ಎಂದರೆ ಸರಿ. ಒ ಎಸ್ 276/2013 ರಲ್ಲಿ ರಾಜಿ

ಮಾಡಿಕೊಳ್ಳುವ ಸಮಯದಲ್ಲಿ **2** ರಿಂದ **7** ನೇ ಪ್ರತಿವಾದಿಗಳ ವಿರುದ್ದ ದಾವಾವನ್ನು ಒತ್ತಾಯಿಸುವುದಿಲ್ಲ ಎಂದು ಮೆಮೊ ಹಾಕಲಾಗಿತ್ತು ಎಂದರೆ ಸರಿ. ಒ ಎಸ್ ನಂ.**276/2013** ರಲ್ಲಿ ಈ ಕೇಸಿನ ವಾದಿಯರು ಏನು ತಕರಾರು ಹಾಕಿದ್ದರು ಎಂದು ತಿಳಿದುಕೊಂಡಿದ್ದೀರಾ ಎಂದು ಸೂಚಿಸಲಾಗಿ ಸಾಕ್ಷಿ ನಮಗೂ ಭಾಗ ಬರಬೇಕು ಎಂದು ಹಾಕಿದ್ದರು ಎಂದು ನುಡಿಯುತ್ತಾರೆ. ಒ ಎಸ್ **276/2013** ರಲ್ಲಿಯ **2** ರಿಂದ **4**ನೇ ಪ್ರತಿವಾದಿಗಳ ಸಹಿಯನ್ನು ಗೊತ್ತಿಲ್ಲದ ಹಾಗೆ ವಾದಿಯರು ಪಡೆದು ವಕಾಲತ್ತನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. **2** ರಿಂದ **4**ನೇ ಪ್ರತಿವಾದಿಗಳಿಗೆ ಕೇಸಿನ ಬಗ್ಗೆಯಾಗಲೀ ದಾವೆಯ ವಿಚಾರವಾಗಲೀ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ.

**30)** ನಮಗೂ ಹಿಸ್ಸೆ ಬರಬೇಕು ಎಂದು ಕೇಳಿರುತ್ತೇನೆ ಎಂದರೆ ಸರಿ. ಸರ್ವೆ ನಂ. **8/5, 8/3, 10/3, 10/5, 161, 172, 171** ಮತ್ತು ಇನ್ನೂ ಹಲವಾರು ಸರ್ವೆ ನಂಬರ್ ಗಳು ಇದ್ದು, ಇವುಗಳಲ್ಲಿ ಭಾಗ ಕೇಳಿರುತ್ತೇನೆ. ಒ ಎಸ್ **146/2014** ನ್ನು ಸಲ್ಲಿಸುವ ಸಮಯದಲ್ಲಾಗಲೀ ಅಥವಾ ಅದಕ್ಕಿಂತ ಪೂರ್ವದಲ್ಲಾಗಲೀ ನೀವೇ ಸ್ವತ್ತುಗಳಲ್ಲಿ ಭಾಗ ಕೇಳಲು ತೊಂದರೆ ಇತ್ತಾ ಎಂದು ಸೂಚಿಸಲಾಗಿ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ತಕರಾರಿನಲ್ಲಿರುವ ಸ್ವತ್ತುಗಳು ಚಿಕ್ಕೇಗೌಡರ ಸ್ವತ್ತುಗಳಾಗಿರುತ್ತದೆ.

**31)** ಲ್ಯಾಂಡ್ ಟ್ರಿಬುನಲ್ ನಿಂದ ಸರ್ವೆ ನಂ. **10/3, 10/5, 8/3, 8/5** ಗಳು ಬಂದಿರುತ್ತದೆ. ಸರ್ವೆ ನಂ. **10/5, 8/3** ಮತ್ತು **8/5** ಯಾರಿಗೆ ಎಲ್ ಆರ್ ಎಫ್ ಆಗಿರುತ್ತದ ಎಂದು ಪ್ರಶ್ನಿಸಲಾಗಿ ಸಾಕ್ಷಿ ಪುಪ್ಪೇಗೌಡರಿಗೆ ಎಂದು ನುಡಿಯುತ್ತಾರೆ. ಸರ್ವೆ ನಂ. **10/6** ಯಾರಿಗೆ ಎಲ್ ಆರ್ ಎಫ್ ಆಗಿರುತ್ತದೆ ಎಂದು ಪ್ರಶ್ನಿಸಲಾಗಿ ಸಾಕ್ಷಿ ಶಿವರುದ್ರೇಗೌಡರಿಗೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ. **34/2** ಯಾರ ಹೆಸರಿಗೆ ಆಗಿದೆ ಎಂದು ಸೂಚಿಸಲಾಗಿ ಸಾಕ್ಷಿ ಸರಿಯಾಗಿ ಗೊತ್ತಿಲ್ಲ ದಾಖಲೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸರ್ವೆ ನಂ. **30/2** ರ ದಾಖಲೆ ಸುಬ್ಬಯ್ಯಶೆಟ್ಟಿಯವರ ಹೆಸರಿಗೆ ಇದೆ ಎಂದರೆ ಸರಿ. ಸರ್ವೆ ನಂ. **34/2** ರ ದಾಖಲೆ ಚಂದ್ರಬೋವಿಯವರ ಹೆಸರಿಗೆ ಇದೆ ಎಂದರೆ

ಸರಿ. ಸರ್ವೆ ನಂ. 76/1 ರ ದಾಖಲೆ ಸುಬ್ಬಯ್ಯಶೆಟ್ಟಿಯವರ ಹೆಸರಿಗೆ ಇದೆ ಎಂದರೆ ಸರಿ. ಸರ್ವೆ ನಂ. 36/4 ರ ದಾಖಲೆ ಮಲ್ಲಪ್ಪಶೆಟ್ಟಿಯವರ ಹೆಸರಿಗೆ ಇದೆ ಎಂದರೆ ಸರಿ.

32) ಸರ್ವೆ ನಂ. 8/3, 8/5 ಮತ್ತು 10/5 ಪುಪ್ಪೇಗೌಡರಿಗೆ ಎಲ್ ಆರ್ ಎಫ್ ನಲ್ಲಿ ಬಂದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಸರ್ವೆ ನಂ. 8/3, 8/5 ಮತ್ತು 10/5 ರ ಮೂಲ ಮಾಲೀಕರು ಯಾರು ಮತ್ತು ಅದನ್ನು ಯಾರು ಗೇಣಿ ಮಾಡುತ್ತಿದ್ದರು ಎಂದು ನಾನು ತಿಳಿದುಕೊಂಡಿಲ್ಲ. ತಕರಾರಿನಲ್ಲಿ ತಿಳಿಸಿರುವ ಸ್ವತ್ತುಗಳು ಯಾರಿಂದ ಹೇಗೆ ಬಂತು ಎಂದು ಗೊತ್ತಿಲ್ಲದೇ ಇದ್ದರೂ ಸುಳ್ಳು ಪ್ರತಿಪಾದನೆ ಮಾಡಿ ಸುಳ್ಳು ಭಾಗ ಕೇಳುತ್ತಿದ್ದೇನೆ ಎಂದರೆ ಸರಿಯಲ್ಲ.

33) ಸರ್ವೆ ನಂ. 10/6, 29, 33/3, 8/3, 31/4 ಇವುಗಳನ್ನು ಎ ಪಿ ಚಂದ್ರೇಗೌಡರು ಗುತ್ತಿಗೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. 1974 ರ ಪೂರ್ವದಲ್ಲಿಯೇ ಸರ್ವೆ ನಂ. 10/6, 29, 33/3, 8/3, 31/4 ಗಳ ಜಮೀನಿನಲ್ಲಿ ಎ ಪಿ ಚಂದ್ರೇಗೌಡರೇ ಗೇಣಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಎ ಪಿ ಚಂದ್ರೇಗೌಡರೇ ಈ ಜಮೀನುಗಳನ್ನು ಅವರ ಮಾಲೀಕರಿಂದ ಗುತ್ತಿಗೆ ಪಡೆದು ಅನುಭವಿಸುತ್ತಿದ್ದರು ಎಂದರೆ ಸರಿಯಲ್ಲ.

34) ಸರ್ವೆ ನಂ. 8/3, 8/5 ಮತ್ತು 10/5 ನ್ನು ಶಿವರುದ್ರೇಗೌಡರು ಗುತ್ತಿಗೆ ಮಾಡುತ್ತಿದ್ದರು ಎಂದರೆ ಸರಿ. ಈ ಸರ್ವೆ ನಂಬರ್ ಗಳಿಗೆ ಶಿವರುದ್ರೇಗೌಡರೇ ಅನುಭವಿಸುತ್ತಿದ್ದು, ಅವರೇ ಅರ್ಜಿ ನೀಡಿ ಅವರ ಹೆಸರಿಗೆ ಆಗಿರುತ್ತದೆ ಎಂದು ಸೂಚಿಸಲಾಗಿ ಸಾಕ್ಷಿ ಈ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಒಟ್ಟು ಕುಟುಂಬದ ಆಸ್ತಿಗಳನ್ನು ಒಟ್ಟಾಗಿ ಅನುಭವಿಸುತ್ತಿದ್ದರೂ ಬೇರೆ ವಾಸವಾಗಿ ಬೇರೆ ವ್ಯವಹಾರ ಮಾಡಿಕೊಂಡು ಮೇಲಿನ ಸರ್ವೆ ನಂಬರ್ ಗಳನ್ನು ಗೇಣಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಒಟ್ಟಾಗಿ ಅನುಭವಿಸುತ್ತಿದ್ದ ಬಗ್ಗೆ ನಿಮ್ಮ ಅಜ್ಜನಾಗಲೀ ಅಥವಾ ನಿಮ್ಮ ಅಜ್ಜನ ಸಹೋದರರಾಗಲೀ ಲ್ಯಾಂಡ್ ಟ್ರಿಬುನಲ್ ಗೆ ಅರ್ಜಿ ನೀಡಿದ್ದಾರಾ ಎಂದು ಸೂಚಿಸಲಾಗಿ ಸಾಕ್ಷಿ ಈ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

**35)** ನಿಡಿ **43, 44** ಪಹಣಿಯಲ್ಲಿ ಕಾಲಂ **9** ರಲ್ಲಿ ಸುಬ್ಬಯ್ಯಶೆಟ್ಟಿಯ ಹೆಸರು ಇದೆ ಎಂದರೆ ಸರಿ. ನಿಡಿ **68** ರಲ್ಲಿ ಮಾಲೀಕರ ಕಾಲಂನಲ್ಲಿ ಮಲ್ಲಪ್ಪಶೆಟ್ಟಿಯ ಹೆಸರು ಇದೆ ಎಂದರೆ ಸರಿ. ನಿಡಿ **17** ರಲ್ಲಿ ಮಾಲೀಕರ ಕಾಲಂನಲ್ಲಿ ಚಂದ್ರಬೋವಿಯ ಹೆಸರು ಇದೆ ಎಂದರೆ ಸರಿ. ನಿಡಿ- **43, 44 , 68** ಮತ್ತು **17** ರ ಪಹಣಿಗಳಲ್ಲಿ ಇರುವ ಆಸ್ತಿಗಳು ನಮ್ಮ ಕಟುಂಬಕ್ಕೆ ಸೇರಿದ್ದು ಎಂದು ತೋರಿಸಲು ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿ. ನಿಡಿ **74** ರಂತೆ ಸರ್ವೆ ನಂ. **164** ಪುಪ್ಪೇಗೌಡರಿಗೆ ಮಂಜೂರಾಗಿರುತ್ತದೆ ಎಂದರೆ ಸರಿ.

**36)** ಸರ್ವೆ ನಂ. **8/4** ಮತ್ತು **10/3** ನ್ನು ಹೊರತುಪಡಿಸಿ ತಕರಾರಿನಲ್ಲಿ ತೋರಿಸಿದ ಉಳಿದ ಸ್ವತ್ತುಗಳಿಗೂ ನಿಮಗೂ ಸಂಬಂಧ ಇಲ್ಲ ಎಂದು ಸೂಚಿಸಲಾಗಿ ಸಾಕ್ಷಿ ಸಂಬಂಧ ಇದೆ ಎಂದು ನುಡಿಯುತ್ತಾರೆ. ವಿಲ್ ಸಿಕ್ಕಿರುವುದಿಲ್ಲ. ವಿಲ್ ನ್ನು ಸಿದ್ದೇಗೌಡರು ನನ್ನ ತಂದೆಗಾಗಲೀ ಅಥವಾ ಸಂಗೇಗೌಡರಿಗಾಗಲೀ ಯಾವಾಗಲೂ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ.

**37)** **9**ನೇ ದಾವಾ ಸ್ವತ್ತನ್ನು **26**ನೇ ಪ್ರತಿವಾದಿಗೆ ಮಾರಾಟ ಮಾಡಲು **1**ನೇ ಪ್ರತಿವಾದಿಗೆ ಯಾವುದೇ ಹಕ್ಕು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. **26**ನೇ ಪ್ರತಿವಾದಿಗೂ **9**ನೇ ಸ್ವತ್ತನ್ನು **27**ನೇ ಪ್ರತಿವಾದಿಗೆ ಮಾರಾಟ ಮಾಡಲು ಯಾವುದೇ ಅಧಿಕಾರ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. **9**ನೇ ದಾವಾ ಸ್ವತ್ತು ಈಗಲೂ ವಾದಿ ಮತ್ತು**1** ರಿಂದ **25** ನೇ ಪ್ರತಿವಾದಿಯ ಒಟ್ಟು ಕುಟುಂಬದ ಸ್ವತ್ತಾಗಿದ್ದು ಮತ್ತು ಎಲ್ಲರ ಜಂಟಿ ಸ್ವಾಧೀನದಲ್ಲಿದ್ದು, ಎಲ್ಲರ ಸ್ವಾಧೀನ ಹಕ್ಕು ಇದ್ದು ಎಲ್ಲ ವಾದಿಯರಿಗೆ ಹಕ್ಕು ಇದೆ ಎಂದರೆ ಸರಿಯಲ್ಲ. **9**ನೇ ದಾವಾ ಸ್ವತ್ತು ಸಿದ್ದೇಗೌಡರಿಗೆ ಸಂಪೂರ್ಣ ಸೇರಿರಲಿಲ್ಲ ಎಂದರೆ ಸರಿಯಲ್ಲ. ಸಿದ್ದೇಗೌಡರನ್ನು **1**ನೇ ಪ್ರತಿವಾದಿ ತಂದೆಯಂತೆ ನೋಡಿಕೊಳ್ಳುತಿದ್ದು, ಹೀಗಾಗಿ ವಿಲ್ ನ್ನು ಬರೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**38)** ಪುಟ್ಟಯ್ಯಬಡಿಗಯ್ಯ ಎನ್ನುವವರಿಗೆ ಸಿದ್ದೇಗೌಡರಿ ಜೀವಿತ ಕಾಲದಲ್ಲಿಯೇ ಭೋಗ್ಯ ಮಾಡಿದ್ದರು. ಭೋಗ್ಯ ಖುಲಾಸೆಯಾದ ಬಗ್ಗೆ ಪತ್ರ ಇದ್ದು ಅದನ್ನು ನ್ಯಾಯಾಲಯಕ್ಕೆ

ಹಾಜರುಪಡಿಸಿದ್ದೇನೆ. ವಿಲ್ ಪ್ರಕಾರ 1ನೇ ಪ್ರತಿವಾದಿಯ ಹೆಸರಿಗೆ ಖಾತೆಯಾಗಿಲ್ಲ ಎನ್ನುವುದು ಸರಿಯಲ್ಲ. ಸುಳ್ಳು ವಂಶವೃಕ್ಷ ನೀಡಿ ಪೌತಿ ಖಾತೆಯಾಗಿರುತ್ತದೆ ಎಂದರೆ ಸರಿಯಲ್ಲ. ವಾದಿಯರು ಎಲ್ಲ ಆಸ್ತಿಗಳಲ್ಲಿ ಭಾಗ ಕೇಳಿದ್ದರೂ ಪ್ರತಿವಾದಿಗಳು ಕೊಟ್ಟಿಲ್ಲ ಎಂದು ಸೂಚಿಸಲಾಗಿ ಸಾಕ್ಷಿ ಅವರಿಗೆ ಹಕ್ಕು ಇಲ್ಲ ಮತ್ತು ಜಂಟಿ ಖಾತೆಯಲ್ಲಿದೆ ಎಂದು ನುಡಿಯುತ್ತಾರೆ. ವಾದಿಯರಿಗೆ ಹಿಸ್ಸೆ ಕೊಡಬೇಕಾಗುತ್ತದೆಂಬ ದುರುದ್ದೇಶದಿಂದ ಸುಳ್ಳು ಪ್ರತಿಪಾದನೆ ಮಾಡಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

<u>ಓ ಹೇ ಕೇ ಸ ಇ ಒ</u>

ಸಾಕ್ಷಿದಾರರ ಸಹಿ

(ಎಂ ಎಸ್ ಶಶಿಕಲ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬೇಲೂರು.